**Class: Shastri-I Sem: I Paper: III Sub: Kannada Paper code: 1213**

**Text Book:** ನುಡಿ ಸಂಪದ ೧ - ಕನ್ನಡ ಭಾಷಾ ಪಠ್ಯ ಪುಸ್ತಕ

ಕಾಲ ಬದಲಾಗುತ್ತದೆ. ಕಾಲಕ್ಕೆ ತಕ್ಕಂತೆ ಕಲಿಯುವ ಮತ್ತು ಕಲಿಸುವ ಕ್ರಮಗಳೂ ಬದಲಾಗಬೇಕು. ಆಧುನಿಕ ಕಾಲದ ಓದಿನ ಕ್ರಮಕ್ಕೂ, ಜಾಗತೀಕರಣ ಸಂದರ್ಭದಲ್ಲಿನ ಓದಿನ ಕ್ರಮಕ್ಕೂ ಅಪಾರ ಅಂತರಗಳಿವೆ. ಬದಲಾದ ಕಾಲಮಾನಕ್ಕನುಗುಣವಾಗಿ ಅಧ್ಯಾಪಕ ಮತ್ತು ವಿದ್ಯಾರ್ಥಿಗಳ ಆಲೋಚನಾ ಕ್ರಮಗಳು ಬದಲಾಗುತ್ತವೆ. ಕಾಲಕಾಲಕ್ಕೆ ಹೊಸ ಓದಿನಿಂದ ಗ್ರಹಿತವಾದ ವಿಚಾರಗಳನ್ನು ವಿದ್ಯಾರ್ಥಿ ಸಮುದಾಯಕ್ಕೆ ನೀಡುತ್ತಾ ಹೊಸ ಕಾಲಕ್ಕೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಇದಕ್ಕಾಗಿ ಸ್ನಾತಕ ಪದವಿ ತರಗತಿಗಳಿಗೆ ಸೆಮಿಸ್ಟರ್ ಪದ್ಧತಿ ಅಳವಡಿಸಿರುವುದು ಸೂಕ್ತವಾಗಿದ್ದು ಪ್ರಚಲಿತ ವಿದ್ಯಮಾನಗಳಿಗೆ ಉತ್ತರ ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಭಾಷಾಬೋಧನೆಗೆ ಅವಕಾಶ ಕಲ್ಪಿಸಲಾಗಿದೆ.

- ವಿದ್ಯಾರ್ಥಿಗಳಿಗೆ ಮನನಮಾಡಿಕೊಳ್ಳಲು ಆಸಕ್ತಿ ಮೂಡುವಂತೆ ಪಠ್ಯ ವಿಷಯ ನಿರೂಪಿಸಲಾಗಿದೆ.
- ಕನ್ನಡ ಸಾಹಿತ್ಯದ ಸಮಗ್ರ ಅರಿವು ಮೂಡುವಂತೆ ಜನಪದ ಸಾಹಿತ್ಯ, ಪ್ರಾಚೀನ ಸಾಹಿತ್ಯ, ವಚನ, ರಗಳೆ, ಷಟ್ಪದಿ, ಸಾಂಗತ್ಯಗಳ ಪ್ರಾತಿನಿಧಿಕ ರೂಪಗಳನ್ನಲ್ಲದೆ, ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.
- ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಚರ್ಚೆ ಮತ್ತು ಸಂವಾದಕ್ಕೆ ಅನುಕೂಲವಾಗುವಂತೆ ಪಠ್ಯವಿಷಯಗಳು ಅಳವಡಿಕೆಗೊಂಡಿವೆ.
- ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾಗುವಂತೆ ಪುಸ್ತಕವನ್ನು ವಿನ್ಯಾಸಗೊಳಿಸಲಾಗಿದೆ.

**Class: Shastri-I Sem: II Paper: III Sub: Kannada Paper code: 2213**

**Text Book:** ನುಡಿ ಸಂಪದ ೨ - ಕನ್ನಡ ಭಾಷಾ ಪಠ್ಯ ಪುಸ್ತಕ

ಮಾಧ್ಯಮಗಳಲ್ಲಿ ಸಮಕಾಲೀನ ಬದುಕಿನ ಕಾಲಗತಿಗೆ ತಕ್ಕಂತೆ ಪಠ್ಯಪುಸ್ತಕಗಳು ಬದಲಾಗಬೇಕು. ಆ ಮೂಲಕ ಜ್ಞಾನಾನ್ವೇಷಣೆಯ ಮಾರ್ಗಗಳು ವಿಸ್ತಾರವಾಗಬೇಕೆಂಬ ಅಪೇಕ್ಷೆಯಿಂದ ಸ್ನಾತಕ ಪದವಿ ಹಂತದ ವಿದ್ಯಾರ್ಥಿಗಳಿಗೆ ಸಾಹಿತ್ಯಕ, ಸಾಮಾಜಿಕ, ಸಂಸ್ಕೃತಿಕ ಮತ್ತು ಮಾನವೀಯ ಪ್ರಜ್ಞೆಯ ಅರಿವನ್ನು ಉಂಟು ಮಾಡುವ ಹಿನ್ನೆಲೆಯಲ್ಲಿ ನವೀನ ಮಾದರಿಯ, ಅರ್ಥಪೂರ್ಣವಾದ ಪಠ್ಯಗಳು ರೂಪುಗೊಂಡಿವೆ.

- ದ್ವಿತೀಯ ಸೆಮಿಸ್ಟರ್ ನ ಈ ಪಠ್ಯಪುಸ್ತಕದಲ್ಲಿ ಮೂರು ಭಾಗಗಳಿದ್ದು ನೆಲ – ಜಲ – ಕಾಲ ಎಂದು ಆಶಯವನ್ನು ವಿಭಿನ್ನ ನೆಲೆಯಲ್ಲಿ ಇಟ್ಟು ನೋಡುವ ಹೊಸ ಪ್ರಯೋಗವನ್ನು ಬಳಕೆ ಮಾಡಲಾಗಿದೆ.
- ರೂಪಿಸಿಕೊಂಡ ಆಶಯಗಳಿಗನುಗುಣವಾಗಿ ಕನ್ನಡದ ಬರಹಗಾರರ ಸೃಜನಶೀಲ ಪ್ರತಿಕ್ರಿಯೆಯ ಆಯ್ದ ಬರಹಗಳನ್ನು ಸಂಗ್ರಹಿಸಿ ಅವುಗಳ ಸ್ವರೂಪದೊಂದಿಗೆ ಸಮಕಾಲೀನ ಬದುಕಿನ ಸ್ಥಿತಿಗನುಗುಣವಾಗಿ ವಿದ್ಯಾರ್ಥಿಗಳಿಗೆ ವಿಷಯವನ್ನು ಚರ್ಚಿಸಲು ಅವಕಾಶವನ್ನು ಒದಗಿಸಿದೆ.
- ಕಥೆಗಳ ಆಯ್ಕೆಯಲ್ಲಿ ಗ್ರಹೀತವಾದ ಸಾಹಿತ್ಯಚರಿತ್ರೆಯ ಪರಂಪರೆಯ ಮಾರ್ಗವನ್ನು ಅನುಸರಿಸದೇ ಪಠ್ಯದ ಆಶಯವಾಗಿರುವ ಕಾಲ – ನೆಲ - ಜಲದ ಪ್ರಸ್ತಾಪವಿರುವ ಯಾವುದೇ ಕಾಲಘಟ್ಟದ ಲೇಖಕರ ಕಥೆಗಳನ್ನು ಆಯ್ಕೆ ಮಾಡಿಕೊಂಡು ಆ ಮೂಲಕ ಭಾಷಾಕಲಿಕೆಗೆ ಬುನಾದಿಯನ್ನು ಒದಗಿಸಲಾಗಿದೆ.